# ಕೆನಡಾ ಸಂಪುಟ: ಭಾರತ ಮೂಲದವರು

**ಕೆನಡಾದಲ್ಲಿ ಇತ್ತೀಚೆಗೆ ನಡೆದ ಸಂಸತ್ ಚುನಾವಣೆಯಲ್ಲಿ ಲಿಬರಲ್ ಪಕ್ಷ ಮೇಲುಗೈ ಸಾಧಿಸಿತು. ಪ್ರಧಾನಿ ಜಸ್ಟಿನ್ ಟ್ರುಡೇ ನ.20ರಂದು 36 ಸದಸ್ಯ ಬಲದ ತಮ್ಮ ಸಂಪುಟವನ್ನು ಜಗತ್ತಿಗೆ ಪರಿಚಯಿಸಿದರು. ಈ ಪೈಕಿ ನಾಲ್ವರು ಭಾರತೀಯ ಮೂಲದವರು.**

**■ ಡಿ.ಎಂ. ಘನಶ್ಯಾಮ**

ಭಾರತೀಯರು ಗಣನೀಯ ಪ್ರಮಾಣದಲ್ಲಿರುವ ದೇಶ ಕೆನಡಾ. ಕಳೆದ ತಿಂಗಳು ನಡೆದ ಸಂಸತ್ ಚುನಾವಣೆಯಲ್ಲಿ ಲಿಬರಲ್ ಪಕ್ಷ ಮೇಲುಗೈ ಸಾಧಿಸಿತು. ಪ್ರಧಾನಿ ಜಸ್ಟಿನ್ ಟ್ರುಡೇ ಕಳೆದ ಬುಧವಾರ (ನ.20) 36 ಸದಸ್ಯ ಬಲದ ತಮ್ಮ ಸಂಪುಟವನ್ನು ಜಗತ್ತಿಗೆ ಪರಿಚಯಿಸಿದರು. ಈ ಪೈಕಿ ನಾಲ್ವರು ಭಾರತೀಯ ಮೂಲದವರು!

ಟ್ರುಡೇ ಅವರ ಹಿಂದಿನ ಸಂಪುಟದಲ್ಲಿ ಕೆಲಸ ಮಾಡಿದ್ದ ಹರ್ಜಿತ್ ಸಜ್ಜನ್, ನವ್‌ದೀಪ್ ಬೈನ್ಸ್ ಮತ್ತು ಬಾರ್ದೀಶ್ ಚಗ್ಗರ್ ಈ ಬಾರಿ ಮತ್ತೊಮ್ಮೆ ಸ್ಥಾನ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಈ ಬಾರಿಯ ಸಂಪುಟದಲ್ಲಿರುವ ಭಾರತೀಯ ಸಂಜಾತರ ಹೊಸ ಮುಖ ಅನಿತಾ ಆನಂದ್ ಅವರದ್ದು. ಕೆನಡಾ ಸರ್ಕಾರದ ಸಚಿವ ಸಂಪುಟದಲ್ಲಿ ಸಚಿವರಾದ ಮೊದಲ ಹಿಂದೂ ಎಂಬ ಶ್ರೇಯವೂ ಅವರದ್ದು.

**ಹರ್‌ಜೀತ್ ಸಜ್ಜನ್:** ಬ್ರಿಟಿಷ್ ಕೊಲಂಬಿಯಾದ ವ್ಯಾನ್‌ಕೊವರ್ ಸೌತ್ ಕ್ಷೇತ್ರದಿಂದ ಆಯ್ಕೆಯಾಗಿರುವ ಸಜ್ಜನ್‌ಗೆ ಇದು ಎರಡನೇ ಗೆಲುವು. ರಕ್ಷಣಾ ಸಚಿವರಾಗಿಯೂ ಅವರದು ಎರಡನೇ ಅವಧಿಯ ಅಧಿಕಾರ.

ಸಜ್ಜನ್ ಅವರ ತಂದೆ ಕುಂದನ್ ಸಿಂಗ್ ಭಾರತದಲ್ಲಿ ಪೊಲೀಸ್ ಅಧಿಕಾರಿಯಾಗಿದ್ದವರು. ಪಂಜಾಬ್‌ನ ಹೊಶಿಯಾಂಪುರ ಜಿಲ್ಲೆಯ ಬೊಂಬೆಲಿಯಲ್ಲಿ ಜನಿಸಿದ ಸಜ್ಜನ್ 1976ರಲ್ಲಿ ತಮ್ಮ ತಾಯಿ ಮತ್ತು ಅಕ್ಕನೊಂದಿಗೆ ವ್ಯಾನ್‌ಕೊವರ್‌ಗೆ ವಲಸೆ ಬಂದವರು. ರಾಜಕೀಯಕ್ಕೆ ಬರುವ ಮೊದಲು ಸಜ್ಜನ್ ಸಹ ಕೆನಡಾದಲ್ಲಿ ಪೊಲೀಸ್ ಅಧಿಕಾರಿಯಾಗಿದ್ದರು. ಪೊಲೀಸ್ ಇಲಾಖೆಯಲ್ಲಿ ಅವರದ್ದು 11 ವರ್ಷಗಳ ಸುದೀರ್ಘ ಸೇವೆ. ಕೆಲ ಸಮಯ ಪತ್ತೇದಾರಿಕೆಯ ಕೆಲಸವನ್ನೂ ಮಾಡಿದ್ದರು. 1989ರಲ್ಲಿ ಕೆನಡಾ ಸೇನೆಯ ಬ್ರಿಟಿಷ್ ಕೊಲಂಬಿಯಾ ರೆಜಿಮೆಂಟ್‌ನಲ್ಲಿ ಅಧಿಕಾರಿಯಾಗಿ ಕೆಲಸಕ್ಕೆ ಸೇರಿ, ಲೆಫ್ಟಿನೆಂಟ್ ಕರ್ನಲ್ ಹುದ್ದೆಗೆ ಏರಿದರು.

ಬೊಸ್ನಿಯಾ ಮತ್ತು ಅಫ್ಘಾನಿಸ್ತಾನಗಳಲ್ಲಿ ಸೇವೆಗೆ ನಿಯೋಜಿತರಾಗಿದ್ದ ಸಜ್ಜನ್, ಕೆನಡಾ ಸೇನೆಯ ರೆಜಿಮೆಂಟ್ ಕಮಾಂಡರ್ ಆಗಿದ್ದ ಮೊದಲ ಸಿಖ್ ಧರ್ಮೀಯ ಎಂಬ ಶ್ರೇಯಕ್ಕೆ ಪಾತ್ರರಾದವರು. ಮಿಲಿಟರಿ ಸೇವೆಗಾಗಿ ಹಲವು ಶೌರ್ಯ ಪ್ರಶಸ್ತಿಗಳನ್ನೂ ಪಡೆದವರು. ವಿಶ್ವ ಸಿಖ್ ಸಂಘಟನೆಗಳ ಒಕ್ಕೂಟದ (World Sikh



ಕೆನಡಾ ರಕ್ಷಣಾ ಸಚಿವ ಹರ್‌ಜಿತ್ ಸಿಂಗ್

Organization WSO) ಬೆಂಬಲದೊಂದಿಗೆ 2015ರಲ್ಲಿ ಮೊದಲ ಬಾರಿ ಚುನಾವಣೆಗೆ ಸ್ಪರ್ಧಿಸಿದ್ದರು. ಇವರ ಸ್ಪರ್ಧೆ ಒಪ್ಪದೇ, ಸುಮಾರು 40 ಸಾವಿರ ಪಂಜಾಬಿ ಉದಾರವಾದಿ ಸಿಖ್ಖರು ಲಿಬರಲ್ ಪಕ್ಷ ತೊರೆದಿದ್ದರು. ಟ್ರುಡೆ ಅವರ ಮನಸ್ಸನ್ನು ಸಿಖ್ ಮೂಲಭೂತವಾದಿಗಳು ಸಂಪೂರ್ಣವಾಗಿ ಕೆಡಿಸಿದ್ದಾರೆ ಎಂದು ರಾಜೀನಾಮೆ ಕೊಟ್ಟಿದ್ದವರು ದೂರಿದ್ದರು.

ಪಂಜಾಬ್‌ನ ಪ್ರತ್ಯೇಕತಾವಾದಿ ಚಳವಳಿ ಬೆಂಬಲಿಸುವ ಖಲೀಸ್ತಾನ್ ಹೋರಾಟಗಾರರ ಪರವಾಗಿ ಸಜ್ಜನ್ ಇದ್ದಾರೆ ಎಂಬುದು ಭಾರತದ ಆತಂಕ. ಕೆನಡಾದ ರಕ್ಷಣಾ ಸಚಿವರಾಗಿ 2017ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಸಜ್ಜನ್ ಸಿಂಗ್ ಅವರನ್ನು ಭೇಟಿಯಾಗಲು ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ನಿರಾಕರಿಸಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಸಜ್ಜನ್, 'ನಾನು ಭಾರತ ಮಾತ್ರವಲ್ಲ, ಯಾವುದೇ ದೇಶವನ್ನೂ ಒಡೆಯುವ ಕೆಲಸಕ್ಕೆ ಬೆಂಬಲ ಕೊಡುವುದಿಲ್ಲ. ನಾನೊಬ್ಬ ಕೆನಡಿಗ. ಕೆನಡಾ ದೇಶದ ಹಿತ ನನಗೆ ಮೊದಲ ಆದ್ಯತೆ' ಎಂದು ಹೇಳಿದ್ದರು.

**ನವ್‌ದೀಪ್ ಬೈನ್ಸ್:** ಕೆನಡಾದ ಒಂಟಾರಿಯೋ ಪ್ರಾಂತ್ಯದ ಮಿಸಿಸೌಗಾಮಾಲ್ಟನ್ ಪ್ರತಿನಿಧಿಸುವ ನವದೀಪ್ ಬೈನ್ಸ್ ಈ ಹಿಂದೆಯೂ ಎರಡು ಬಾರಿ ಸಂಸದರಾಗಿದ್ದರು. ಟೊರೊಂಟೊದಲ್ಲಿಯೇ ಜನಿಸಿದ ಬೈನ್ಸ್‌ರ ತಂದೆತಾಯಿ ವಲಸಿಗರು. ರೈರ್ಸನ್ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರೂ ಆಗಿರುವ ಬೈನ್ಸ್ ಹಣಕಾಸು ವಿಶ್ಲೇಷಕರಾಗಿಯೇ ಕೆಲಸ ಮಾಡಿದ್ದರು.

ಪ್ರಧಾನಿ ಟ್ರುಡೇ ಅವರಿಗೆ ದೀರ್ಘಾವಧಿ ಗೆಳೆಯ ಮತ್ತು ಸಲಹೆಗಾರರಾಗಿರುವ ಬೈನ್ಸ್, ಈ ಹಿಂದೆ ಟ್ರುಡೇ ಅವರ ಸಂಸದೀಯ ಕಾರ್ಯದರ್ಶಿಯಾಗಿಯೂ ಅವರು ಕೆಲಸ ಮಾಡಿದ್ದಾರೆ. ಕಳೆದ ವರ್ಷ ಮೇ ತಿಂಗಳಲ್ಲಿ ಅಮೆರಿಕ ವಿಮಾನ ನಿಲ್ದಾಣವೊಂದರಲ್ಲಿ ಸೆಕ್ಯುರಿಟಿ ಅಧಿಕಾರಿಯೊಬ್ಬರು ಬೈನ್ಸ್ ಅವರಿಗೆ ಪೇಟಾ ತೆಗೆಯುವಂತೆ ತಾಕೀತು ಮಾಡಿದ್ದರು. ಇದನ್ನು ಖಂಡಿಸಿ ಬೈನ್ಸ್ ಸುದ್ದಿಯಾಗಿದ್ದರು.

**ಬರ್ದಿಶ್ ಚಗ್ಗರ್:** ವಾಟರ್ಲೂ ಪ್ರದೇಶದಲ್ಲಿ ಜನಿಸಿ, ಅಲ್ಲೇ ಬೆಳೆದವರು ಚಗ್ಗರ್. ವಾಟರ್ಲೂ ವಿಶ್ವವಿದ್ಯಾಲಯದಲ್ಲಿ ಓದುವಾಗಲೇ ಅವರು ಅಲ್ಲಿನ ಯೂತ್ ಲಿಬರಲ್ಸ್ ಅಧ್ಯಕ್ಷರಾಗಿದ್ದರು. 2019ರಲ್ಲಿ ಒಂಟಾರಿಯೋ ಕ್ಷೇತ್ರದಲ್ಲಿ ಎರಡನೇ ಬಾರಿಗೆ ಪುನರಾಯ್ಕೆಯಾದರು.

201518ರವರೆಗೆ ಟ್ರುಡೇ ಅವರ ಸಂಪುಟದಲ್ಲಿ ಸಣ್ಣ ವ್ಯಾಪಾರ ಮತ್ತು ಪ್ರವಾಸೋದ್ಯಮ ಖಾತೆ ನಿರ್ವಹಿಸಿದ್ದರು. 2016ರಲ್ಲಿ ಕೆನಡಾ ಸಂಸತ್ತಿನ ಕೆಳಮನೆಯಲ್ಲಿ (ಹೌಸ್ ಆಫ್ ಕಾಮನ್ಸ್) ಸರ್ಕಾರದ ಪ್ರತಿನಿಧಿಯಾಗಿದ್ದರು. ಕೆನಡಾದ ಇತಿಹಾಸದಲ್ಲಿ ಮಹಿಳೆಯೊಬ್ಬರು ಈ ಜವಾಬ್ದಾರಿ ನಿರ್ವಹಿಸಿದ್ದು ಅದೇ ಮೊದಲು.

**ಅನಿತಾ ಆನಂದ್:** ಕಾರ್ಪೊರೇಟ್ ಆಡಳಿತ ಮತ್ತು ಷೇರುದಾರರ ಹಕ್ಕುಗಳ ಬಗ್ಗೆ ತಲಸ್ಪರ್ಶಿ ಜ್ಞಾನವಿರುವ ಅನಿತಾ ಒಂಟಾರಿಯೋದ ಓಕ್ವಿಲ್ಲೆ ಕ್ಷೇತ್ರದ ಸಂಸದೆ. ನೊವಾ ಸ್ಕಾಟಿಯಾ ನಗರದಲ್ಲಿ ಜನಿಸಿದ ಅನಿತಾ ಅವರದು ಕೆನಡಾ ಸರ್ಕಾರದಲ್ಲಿ ಸಚಿವೆಯಾದ ಮೊದಲ ಹಿಂದೂ ಎಂಬ ಶ್ರೇಯ.

ಟೊರೊಂಟೊ ವಿಶ್ವವಿದ್ಯಾಲಯದಲ್ಲಿ 2006ರಿಂದ ಕಾನೂನು ಪ್ರಾಧ್ಯಾಪಕರಾಗಿರುವ ಅನಿತಾ, ಈ ಹಿಂದೆ ವೆಸ್ಟ್ರನ್ ವಿವಿ, ಯೇಲ್ ಕಾನೂನು ಶಾಲೆ ಮತ್ತು ಕ್ವೀನ್ಸ್ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡಿದ್ದರು. 2015ರಲ್ಲಿ ಅನಿತಾ ಒಂಟಾರಿಯೋ ಸರ್ಕಾರದ ಪರ್ಯಾಯ ಆರ್ಥಿಕ ಯೋಜನಾ ತಜ್ಞರ ಸಮಿತಿಯಲ್ಲಿ ಸದಸ್ಯೆಯಾಗಿ ಕೆಲಸ ಮಾಡಿದ್ದರು. ಇದೇ ಅವಧಿಯಲ್ಲಿ ಏರ್ ಇಂಡಿಯಾ ವಿಮಾನದ ಮೇಲೆ ನಡೆದಿದ್ದ ಬಾಂಬ್ ದಾಳಿಯ ತನಿಖಾ ಆಯೋಗದಲ್ಲಿ ಸಂಶೋಧಕಿಯಾಗಿ ಸೇವೆ ಸಲ್ಲಿಸಿದ್ದರು. ಮೆಸ್ಸಿ ಕಾಲೇಜಿನ ಆಡಳಿತ ಮಂಡಳಿ ಸದಸ್ಯೆಯಾಗಿದ್ದಾರೆ. ■